ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ದ್ಯಾಮೇಶ್ | ಪಿ.ಡಬ್ಲ್ಯೂ. | 5 |
| ತಂದೆಯ ಹೆಸರು | ಃ | ಕೆ.ಬಿ ಜಯ್ಯಪ್ಪ | ಸಿ.ಡಬ್ಲ್ಯೂ. | 15 |
| ವಯಸ್ಸು | ಃ | 41 ವರ್ಷ | | |
| ಉದ್ಯೋಗ | ಃ | ಸಿಪಿಸಿ 142 ಅಜಾದ್‌ನಗರ ವೃತ್ತ ಕಛೇರಿ, ದಾವಣಗೆರೆ, | | |
| ವಾಸ ಸ್ಥಳ | ಃ | ದಾವಣಗೆರೆ. | | |

ದಿ.01.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)** ಃ

1. 2019 ಜುಲೈ ಯಿಂದ 2022 ಜುಲೈ ರವರೆಗೆ ನಾನು ದಾವಣಗೆರೆ ಸಿಇಎನ್ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 26.12.2019 ರಂದು ಮಧಾಹ್ನ 12.00 ಗಂಟೆಯ ಸಮಯದಲ್ಲಿ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ನನಗೆ ಮತ್ತು ಚಾಸಾ.9 ರಿಂದ ಚಾಸಾ.14 ಮತ್ತು ಚಾಸಾ.16 ರವರನ್ನು ಕರೆದು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ದಾಳಿ ಮಾಡಲು ಹೋಗಬೇಕೆಂದು ತಿಳಿಸಿದರು.

3. ನಂತರ ಮಾಹಿತಿ ಬಂದ ಸ್ಥಳಕ್ಕೆ ಮಧ್ಯಾಹ್ನ 12.15 ಕ್ಕೆ ಠಾಣೆಯಿಂದ ಹೊರಟು ದಾವಣಗೆರೆ ಕೆ.ಎಸ್.ಆರ್.ಟಿ.ಸಿ ಹಿಂಭಾಗದ ಇಂದಿರಾ ಕ್ಯಾಂಟಿನ್ ಹತ್ತಿರ ಅಂದರೆ ಮಾಹಿತಿ ಬಂದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಮರೆಯಲ್ಲಿ ನಿಂತು, ನಾವುಗಳು ಒಬ್ಬರಿಗೊಬ್ಬರು ಅಂಗಶೋಧನೆ ಮಾಡಿಕೊಂಡು, ನಮ್ಮಲ್ಲಿ ಗಾಂಜಾ ಇಲ್ಲದಿರುವ ಬಗ್ಗೆ ಖಚಿತಿ ಪಡಿಸಿಕೊಂಡೆವು.

4. ಅಂಗಶೋಧನೆ ಮಾಡಿಕೊಂಡ ನಂತರ ಮಾಹಿತಿ ಬಂದ ಸ್ಥಳದ ಕಡೆ ನೋಡಿದಾಗ, ಅಲ್ಲಿ ಮೂರು

ಜನ ವ್ಯಕ್ತಿಗಳು ನಿಂತುಕೊಂಡಿದ್ದರು, ಅದರಲ್ಲಿ ಇಬ್ಬರ ಕೈಯಲ್ಲಿ ಕವರ್ ಗಳನ್ನು ಹಿಡಿದುಕೊಂಡು, ಗಿರಾಕಿಗಳಿಗಾಗಿ ಕಾಯುತ್ತಿರುವುದು ಕಂಡು ಬಂತು. ಆಗ ಚಾಸಾ.1 ರವರು ಚಾಸಾ.13 ರವರಿಗೆ ರೂ.500/- ಕೊಟ್ಟು ಸದರಿ ವ್ಯಕ್ತಿಗಳಿಂದ ಗಾಂಜಾವನ್ನು ಖರೀದಿ ಮಾಡಿಕೊಂಡು ಬರುವಂತೆ ಹೇಳಿ ಕಳುಹಿಸಿದರು. ಆಗ ಚಾಸಾ.13 ರವರು ಗಾಂಜಾ ಇರುವ ಎರಡು ಪಾಲಿಥಿನ್ ಕವರ್ ಗಳನ್ನು ಖರೀದಿಸಿಕೊಂಡು ಬಂದರು. ಸದರಿ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ತೆರೆದು ನೋಡಿದಾಗ ಸದರಿ ಕವರ್ ನಲ್ಲಿ ಗಾಂಜಾ ಇರುವುದು ಕಂಡು ಬಂತು.

5. ಅದಾದ ನಂತರ ಸದರಿ ಚಾಸಾ.1 ರವರ ಸೂಚನೆಯಂತೆ ಸದರಿ ಮೂರು ಜನ ವ್ಯಕ್ತಿಗಳನ್ನು ಹಿಡಿದುಕೊಳ್ಳಲು ಹೊದಾಗ ಅವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು, ಆದರೂ ಸಹ ನಾವುಗಳು ಅವರುಗಳನ್ನು ಹಿಡಿದುಕೊಂಡು, ಅವರುಗಳ ಹೆಸರು ಮತ್ತು ವಿಳಾಸ ಕೇಳಲಾಗಿ, 1. ರೇವಣಸಿದ್ದಪ್ಪ, 2. ಸತೀಶ್ ಬಾಬುರಾವ್ ಮತ್ತು 3. ಲೋಕೇಶ್ ಎಂದು ತಿಳಿಸಿದರು. ಸದರಿ ಮೂರು ವ್ಯಕ್ತಿಗಳ ಪೈಕಿ ಇಬ್ಬರಲ್ಲಿ ಕವರ್ ಗಳು ಇದ್ದವು. 1 ನೇ ಆರೋಪಿಯ ಕೈಯಲ್ಲಿ ಇದ್ದಂತಹ ಹಳದಿ ಮತ್ತು ಕೆಂಪು ಮಿಶ್ರಿತ ಕವರ್ ನ್ನು ಪರಿಶೀಲಿಸಲಾಗಿ ಸದರಿ ಕವರ್ ನಲ್ಲಿ ಗಾಂಜಾ ಇತ್ತು. 2 ನೇ ಆರೋಪಿಯ ಬಳಿ ಇದ್ದ ಕವರ್ ನ್ನು ಪರಿಶೀಲಿಸಲಾಗಿ ಸದರಿ ಕವರ್ ನಲ್ಲಿ ಸಹ ಗಾಂಜಾ ಇತ್ತು. ಸದರಿ ಗಾಂಜಾವನ್ನು ಎಲ್ಲಿಂದ ತಂದಿರುವುದಾಗಿ ಮತ್ತು ಯಾಕೇ ತಂದಿರುವುದಾಗಿ ಕೇಳಲಾಗಿ, ಶಿಶುನಾಳ ಊರಿನ ಪಕೀರ ರಿಂದ ಮಾರಾಟ ಮಾಡುವ ಉದ್ದೇಶದಿಂದ ತಂದಿರುವುದಾಗಿ ತಿಳಿಸಿದರು.

6. ನಂತರ ಪಂಚರ ಸಮಕ್ಷಮ ಸದರಿ ಗಾಂಜಾವನ್ನು ತೂಕ ಯಂತ್ರದಿಂದ ತೂಕ ಮಾಡಿಸಿದ್ದು, ಚಾಸಾ.13 ರವರು ಆರೋಪಿತರಿಂದ ಖರೀದಿಸಿ ತಂದಿದ್ದ ಗಾಂಜಾವನ್ನು ಸಹ ತೂಕ ಮಾಡಲಾಯಿತು. 1 ನೇ ಆರೋಪಿ ಬಳಿ 218 ಗ್ರಾಂ ಗಾಂಜಾ ಇತ್ತು ಮತ್ತು 2 ನೇ ಅರೋಪಿ ಬಳಿ 780 ಗ್ರಾಂ ತೂಕ ಗಾಂಜಾ ಇತ್ತು. ಚಾಸಾ.13 ರವರು ಖೀರಿದಿ ಮಾಡಿಕೊಂಡು ತಂದಿದ್ದ ಗಾಂಜಾ 12 ಗ್ರಾಂ ಇತ್ತು. ಸದರಿ ಗಾಂಜಾಗಳನ್ನು ಚಾಸಾ.12 ರವರಿಂದ ಪ್ಯಾಕ್ ಮಾಡಿಸಿ, ಸೀಲ್ ಮಾಡಿ ವಶಕ್ಕೆ ಪಡೆದರು.

7. ನಂತರ ಆರೋಪಿತರಲ್ಲಿ ಗಾಂಜಾ ಮತ್ತು ಗಾಂಜಾ ಮಾರಾಟ ಮಾಡಿದ ಹಣ ಇರುವ ಬಗ್ಗೆ ಅಂಗಶೋಧನೆ ಮಾಡಲು ಚಾಸಾ.1 ರವರು ಪತ್ರಾಂಕಿತ ಅಧಿಕಾರಿ ಸಮಕ್ಷಮ ಆರೋಪಿತರಿಗೆ ಅಂಗಶೋಧನೆ ಮಾಡಲು ಕೇಳಿದಾಗ ಪತ್ರಾಂಕಿತ ಅಧಿಕಾರಿ ಅಂಗಶೋಧನೆ ಮಾಡಲು ಒಪ್ಪಿ ಸಹಿ ಮಾಡಿದರು. ಚಾಸಾ.4 ರವರು ಚಾಸಾ.1 ರವರ ಕೋರಿಕೆಯ ಮೇರೆಗೆ ಆರೋಪಿತರ ಅಂಗಶೋಧನೆ ಮಾಡಿದ್ದು, 2 ಮತ್ತು 3 ನೇ ಆರೋಪಿ ಬಳಿ ಗಾಂಜಾ ಮತ್ತು ಗಾಂಜಾಕ್ಕೆ ಸಂಬಂಧಿಸಿದ ಹಣ ಸಿಕ್ಕಿರುವುದಿಲ್ಲ. 1 ನೇ ಆರೋಪಿ ಬಳಿ ರೂ.100/- ಮುಖಬೆಲೆಯ ಹತ್ತು ನೋಟುಗಳು ಸಿಕ್ಕಿದ್ದು, ಸದರಿ ಹಣದ ಬಗ್ಗೆ 1 ನೇ ಆರೋಪಿಯನ್ನು ವಿಚಾರಿಸಿದಾಗ ಸದರಿ ಹಣ ಗಾಂಜಾ ಮಾರಾಟ ಮಾಡಿದ್ದರಿಂದ ಬಂದ ಹಣ ಎಂದು ತಿಳಿಸಿದನು. ಸದರಿ ಹಣವನ್ನು ವಶಕ್ಕೆ ಪಡೆದುಕೊಂಡರು.

8. ಮೇಲ್ಕಂಡ ಆರು ಸೊತ್ತುಗಳನ್ನು ಮತ್ತು ಆರೋಪಿತರನ್ನು ವಶಕ್ಕೆ ಪಡೆದುಕೊಂಡರು. ಪಂಚನಾಮೆಯನ್ನು ಪಂಚರ ಸಮಕ್ಷಮ, ಪತ್ರಾಂಕಿತ ಅಧಿಕಾರಿಯ ಸಮಕ್ಷಮ ಮತ್ತು ಚಾಸಾ.1 ರವರು ನುಡಿದಿದಂತೆ ನಾನು ಲ್ಯಾಪ್ ಟ್ಯಾಪ್ ನಲ್ಲಿ ಟೈಪ್ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದೆ. ನಿಪಿ.10 ರಲ್ಲಿ ಸಾಕ್ಷಿಯ ಸಹಿಯನ್ನು **ನಿಪಿ.10(ಜಿ)** ಎಂದು ಗುರುತಿಸಲಾಯಿತು.

9. ಈ ದಿನ ನ್ಯಾಯಾಲಯ ಮುಂದೆ ಹಾಜರಿರುವ 1 ಮತ್ತು 3 ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿ ಗೈರು ಹಾಜರಿದ್ದು, ಗೈರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. ಮಹಜರ್ ಸಮಯದಲ್ಲಿ ಈಗಾಗಲೇ ನಿಪಿ.11 ರಿಂದ ನಿಪಿ.21 ಎಂದು ಗುರುತಿಸಲಾದ ಫೊಟೋ ತೆಗೆಸಿರುತ್ತಾರೆ. ಸದರಿ ಫೊಟೋದಲ್ಲಿ ನಾನು ಲ್ಯಾಪ್ ಟ್ಯಾಪ್ ನಲ್ಲಿ ಟೈಪ್ ಮಾಡುತ್ತಿರುವುದು ಕಂಡು ಬರುತ್ತದೆ. ಎಂ.ಓ.1, ಎಂ.ಓ.3 ಮತ್ತು ಎಂ.ಓ.4 ಇವುಗಳನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಹಣವನ್ನು ಈಗಾಗಲೇ ಎಂ.ಓ.2 ಎಂದು ಗುರುತಿಸಲಾಗಿದೆ.

10. ನಂತರ ಕೆ.ಟಿ.ಜೆ ನಗರ ಪೋಲೀಸ್ ಠಾಣೆಗೆ ಮಾಲುಗಳು ಮತ್ತು ಆರೋಪಿಗಳ ಸಮೇತ

ಹಿಂದಿರುಗಿದ್ದು, ಆರೋಪಿತರ ವಿರುದ್ಧ ಆರೋಪಿ ಸಾಬಿತಾಗಿದ್ದರಿಂದ, ಅವರುಗಳ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ.

<u>ಪಾಟೀ ಸವಾಲು : ಶ್ರೀ ಕೆ.ಎಚ್.ವಿ, ವಕೀಲರಿಂದ ಆರೋಪಿತರ ಪರವಾಗಿ</u> :

11. ಆ ದಿನ ಚಾಸಾ.1 ರವರು ಹೇಳಿದಂತೆ ನಾನು ಒಟ್ಟು ಮೂರುವರೆ ಪುಟಗಳನ್ನು ಟೈಪ್ ಮಾಡಿರುತ್ತೇನೆ. ಟೈಪ್ ಮಾಡಿದ ನಂತರ ಸ್ಥಳದಲ್ಲಿಯೇ ಪೋರ್ಟೇಬಲ್ ಪ್ರಿಂಟರ್ ನಿಂದ ಪ್ರಿಂಟ್ ತೆಗೆದಿರುತ್ತೇನೆ. ಪೋರ್ಟೇಬಲ್ ಪಿಂಟರ್ ಯಾವ ಕಂಪನಿಯದ್ದು ಎಂದು ಈಗ ನನಗೆ ನೆನಪಿಲ್ಲ. ನಿಪಿ.11 ರಿಂದ ನಿಪಿ.21 ರ ಪೊಟೋಗಳಲ್ಲಿ ಸದರಿ ಪ್ರಿಂಟರ್ ಕಾಣಿಸುವುದಿಲ್ಲ ಎಂದರೆ ಸರಿ.

12. ಪೊಟೋಗಳನ್ನು ಪೋಲೀಸ್ ಸಿಬ್ಬಂದಿಯಾದ ಚಾಸಾ.16 ರವರು ತೆಗೆದಿರುತ್ತಾರೆ. ನಾನು ಟೈಪ್ ಮಾಡುತ್ತಿರುವುದನ್ನು ಚಾಸಾ.16 ರವರು ಪೊಟೋ ತೆಗೆದಿದ್ದಾರೋ ಇಲ್ಲವೋ ಎಂದು ನನಗೆ ಹೇಳಲಿಕ್ಕಾಗುವುದಿಲ್ಲ.

13. ಚಾಸಾ.1 ರವರು ಚಾಸಾ.13 ರವರಿಗೆ ಒಟ್ಟು ರೂ.500/- ಗಳನ್ನು ಕೊಟ್ಟಿದ್ದು, ಚಾಸಾ.13 ರವರು ಅವುಗಳಲ್ಲಿ ರೂ.100/- ಅನ್ನು ವಾಪಸ್ ತಂದು ಕೊಟ್ಟರು. ಚಾಸಾ.13 ರವರು 1 ನೇ ಆರೋಪಿಯಿಂದ ಗಾಂಜಾ ಖರೀದಿ ಮಾಡಿಕೊಂಡಿರುವುದಾಗಿ ತಿಳಿಸಿದ. ಚಾಸಾ.13 ರವರು 1 ನೇ ಆರೋಪಿಯಿಂದ ಗಾಂಜಾ ಖರೀದಿ ಮಾಡಿದ್ದನ್ನು ನಾನು ನೋಡಿದ್ದೇನೆ. 1 ನೇ ಆರೋಪಿ ಮಾರುತಿ ಟೆಕ್ಸ್ ಟೈಕ್ಸ್ ಮತ್ತು ಗಾರ್ಮೆಂಟ್ಸ್ ಎಂಬ ಹೆಸರಿನ ಹಳದಿ ಮತ್ತು ಕೆಂಪು ಬಣ್ಣದ ಚೀಲದಿಂದ ಗಾಂಜಾ ವನ್ನು ತೆಗೆದು ಚಾಸಾ.13 ರವರಿಗೆ ಖರೀದಿಗೆ ಕೊಟ್ಟಿರುತ್ತಾನೆ. ಮಾರುತಿ ಟೆಕ್ಸ್ ಟೈಲ್ ಎಂಬ ಅಕ್ಷರ ನನಗೆ ದೂರದಿಂದ ಕಾಣಿಸುತ್ತಿರಲಿಲ್ಲ. ಸಾಕ್ಷಿಯು ಮುಂದುವರೆದು, ಹಳದಿ ಮತ್ತು ಕೆಂಪು ಬಣ್ಣದ ಚೀಲ ಕಾಣಿಸುತ್ತಿತ್ತು ಎಂದು ಹೇಳುತ್ತಾರೆ.

14. ಚಾಸಾ.13 ರವರು 1 ನೇ ಆರೋಪಿಯಿಂದ ಗಾಂಜಾ ಖರೀದಿ ಮಾಡುತ್ತಿದ್ದ ಸಮಯದಲ್ಲಿ 3 ನೇ ಆರೋಪಿ ಉಳಿದ ಆರೋಪಿತರ ಜೊತೆ ನಿಂತುಕೊಂಡಿದ್ದ. 3 ನೇ ಆರೋಪಿ ಯಾವ ಬಟ್ಟೆ ಧರಿದ್ದ

ಎಂದರೆ ಸಾಕ್ಷಿಯು ಕೆಂಪು ಟೀ ಶರ್ಟ್ ಹಾಕಿದ್ದ ಎಂದು ಹೇಳುತ್ತಾರೆ.

15. ಪೊಟೋದಲ್ಲಿ ನಾವು ನಿಂತಿದ್ದ ಸ್ಥಳದ ಮುಂಭಾಗದ ಕಡೆ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣ ಇರುತ್ತದೆ. ಪೊಟೋದಲ್ಲಿ ನಾವು ನಿಂತಿದ್ದ ಸ್ಥಳದ ಪಶ್ಚಿಮ ಭಾಗಕ್ಕೆ ಆಶೋಕ ಇಂಟರ್ ನ್ಯಾಷನಲ್ ಹೊಟೇಲ್ ಇರುತ್ತದೆ. ಸ್ಥಳದ ಚಕ್ಕು ಬಂದಿ ಪೂರ್ವ ಪಶ್ಚಿಮಕ್ಕೆ ಗಣೇಶ್ ಲೇಜೌಟ್ ನ 2 ನೇ ಕ್ರಾಸ್, ಉತ್ತರಕ್ಕೆ ಕೆ.ಜೆ ಹುಂಡೈ ಕಾರ್ ಮಾಲೀಕರ ಖಾಲೀ ನಿವೇಶನ, ದಕ್ಷಿಣಕ್ಕೆ ಡಿಸಿಎಂ ನ ಮೊಟನಾಗಮ್ಮ ಎಂಬುವವರಿಗೆ ಸೇರಿದ ಖಾಲೀ ನಿವೇಶನ. ಇಂದಿರಾ ಕ್ಯಾಂಟಿನ್ ದಕ್ಷಿಣ ಮತ್ತು ಪೂರ್ವದ ಮಧ್ಯದಲ್ಲಿ ಅಂದರೆ ನೈರುತ್ಯ ದಿಕ್ಕಿಗೆ ಬರುತ್ತದೆ.

16. ನಾನು ಮತ್ತು ಸಿಬಂದ್ದಿಗಳು ನಿಂತು ಪೊಟೋ ತೆಗೆದಿದ್ದ ಸ್ಥಳ ಸಾರ್ವಜನಿಕ ರಸ್ತೆ. ಇಂದಿರಾ ಕ್ಯಾಂಟಿನ್ ಬಳಿ ಯಾವುದೇ ಪೊಟೋ ತೆಗೆಸಿಲ್ಲ. ಪೊಟೋದಲ್ಲಿ ನಾವು ನಿಂತುಕೊಂಡಿದ್ದ ಸ್ಥಳದ ಹಿಂಭಾಗದಲ್ಲಿ ವಾಸದ ಮನೆಗಳು ಇರುತ್ತದೆ. ನಾವು ಸದರಿ ಸ್ಥಳಕ್ಕೆ ಹೋಗಿ, ನಾವು ವಾಚ್ ಮಾಡುತ್ತಿದ್ದ ಸ್ಥಳದಿಂದ, ಮಹಜರ್ ಕ್ರಮ ಜರುಗಿಸುವ ವರೆಗೆ ಎರಡು ತಾಸು ಆಗಿರುತ್ತದೆ. ಮಹಜರ್ ಕ್ರಮ ಜರುಗಿಸುವವರೆಗೂ ಸದರಿ ಸಾರ್ವಜನಿಕ ರಸ್ತೆಯನ್ನು ಬಂದ್ ಮಾಡಲಾಗಿತ್ತ ಎಂದು ಕೇಳಲಾಗಿ ಸಾಕ್ಷಿಯು ರಸ್ತೆ ಬಂದ್ ಮಾಡಿರಲಿಲ್ಲ, ಸದರಿ ರಸ್ತೆಯಲ್ಲಿ ಒಂದೇರಡು ವಾಹನಗಳು ಸಂಚರಿಸುತ್ತಿದ್ದವು ಎಂದು ಹೇಳುತ್ತಾರೆ.

17. ಗಣೇಶ್ ಲೇಜೌಟ್ ನಲ್ಲಿ 1 ನೇ ಕ್ರಾಸ್, 2 ನೇ ಕ್ರಾಸ್ ಮತ್ತು 3 ನೇ ಕ್ರಾಸ್ ಇತ್ಯಾದಿಯಾಗಿ ಬೋರ್ಡ್ ಹಾಕಿದ್ದಾರಾ ಎಂದರೆ ಸಾಕ್ಷಿಯು ಬೋರ್ಡ್ ಹಾಕಿರುವ ಬಗ್ಗೆ ನನಗೆ ಈಗ ಹೇಳಲಿಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಪೊಟೋಗಳಲ್ಲಿ ಗಣೇಶ್ ಲೇಜೌಟ್ ಬೋರ್ಡ್ ಕಾಣಿಸುವುದಿಲ್ಲ ಎಂದರೆ ಸರಿ. ಆರೋಪಿತರು ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳಿದ ಸ್ಥಳದಲ್ಲಿಯೇ ಮಹಜರ್ ಜರುಗಿಸಲಾಯಿತು. ಗಾಂಜಾ ಮಾರಾಟ ಮಾಡುತ್ತಿದ್ದ ಸ್ಥಳದ ಅಕ್ಕ-ಪಕ್ಕದವರಿಂದ ಸಹಿ ಪಡೆದಿಲ್ಲ.

18. ನಿಪಿ.11 ರ ಪೋಟೋದಲ್ಲಿ ಹಿಂಭಾಗದಲ್ಲಿ ಒಂದು ಜೀಪ್ ಕಾಣಿಸುತ್ತಿದ್ದು, ಸದರಿ ಜೀಪ್ ನಂತರ ಒಂದು ಕಟ್ಟಡ ಕಾಣಿಸುತ್ತಿದ್ದು, ಸದರಿ ಕಟ್ಟಡ ಯಾವ ಕಟ್ಟಡ ಎಂದರೆ ಸಾಕ್ಷಿಯು ಅದು ಮನೆ ಇರಬಹುದು ಎಂದು ಹೇಳುತ್ತಾರೆ. ನಿಪಿ.11 ರ ಪೋಟೋದಲ್ಲಿ ಕಾಣಿಸುತ್ತಿರುವ ಜೀಪ್ ಪೋಲೀಸ್ ಜೀಪೊ ಸಾರ್ವಜನಿಕರ ಜೀಪೊ ಎಂದರೆ ಸಾಕ್ಷಿಯು ತನಗೆ ಹೇಳಲಿಕ್ಕಾಗುವುದಿಲ್ಲ ಎಂದು ಹೇಳುತ್ತಾರೆ.

19. ಪಂಚನಾಮೆಯನ್ನು ಸ್ಥಳದಲ್ಲಿಯೇ ಟೈಪ್ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಟೈಪ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ.13 ರವರು ಆರೋಪಿತರಿಂದ ಗಾಂಜಾ ಖರೀದಿ ಮಾಡುತ್ತಿದುದ್ದನ್ನು ನಮ್ಮ ಪೋಲೀಸ್ ಸಿಬ್ಬಂದಿ ಪೊಟೋ ತೆಗೆದಿಲ್ಲ. ನಾನು ದಾಳಿಯಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಕಂಠ ಪಾಠ ಮಾಡಿಕೊಂಡು ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.